PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 5, MAR-APR 2021, 109-120
©*IIMRD*, Mysuru
www.iimrd.com

# ಗುಬ್ಬಿಯ ರಾಜಕೀಯ ಚರಿತ್ರೆ : ಒಂದು ಅವಲೋಕನ

ಡಾ. ಬಿ. ಆರ್. ಚಂದ್ರಶೇಖರಯ್ಯ[1]

**ಪೀಠಿಕೆ**

ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಗುಬ್ಬಿ ಕೂಡ ಪ್ರಮುಖವಾದವುಗಳಲ್ಲಿ ಒಂದು. ಇದು ತುಮಕೂರಿನಿಂದ ಶಿವಮೊಗ್ಗಕ್ಕೆ ತೆರಳುವ ರಾಷ್ಟ್ರೀಯ ಹೆದ್ದಾರಿ 206ರಲ್ಲಿ ಮತ್ತು ಜಿಲ್ಲಾ ಕೇಂದ್ರದಿಂದ ಪಶ್ಚಿಮಕ್ಕೆ 21 ಕಿ.ಮೀ. ರಾಜ್ಯ ರಾಜದಾನಿ ಬೆಂಗಳೂರಿನಿಂದ 90 ಕಿ.ಮೀ. ದೂರದಲ್ಲಿದೆ. ಇದು ಚಂದ್ರಶೇಖರಪುರ (ಚಿಟ್ನಹಳ್ಳಿ), ಕಡಬ, ಚೇಳೂರು, ನಿಟ್ಟೂರು, ಎಂ.ಎನ್. ಕೋಟೆ ಹಾಗೂ ಹಾಗಲವಾಡಿ ಹೋಬಳಿಗಳನ್ನು ಒಳಗೊಂಡಿದೆ.[1] ಗುಬ್ಬಿಯ ಅಮರಗೊಂಡದ ಮಲ್ಲಿಕಾರ್ಜುನ ದೇವಸ್ಥಾನವು ಹಿಂದೆ ಒಂದು ಆಧ್ಯಾತ್ಮ ಕೇಂದ್ರವಾಗಿತ್ತು. ಅಲ್ಲಿ ಪ್ರತಿನಿತ್ಯ ಧಾರ್ಮಿಕ ಉಪನ್ಯಾಸ, ಪ್ರಸಾದ ವಿನಿಯೋಗ ಮತ್ತಿತರ ಕಾರ್ಯಗಳು ನಡೆಯುತ್ತಿದ್ದವು ಎಂದು ತಿಳಿದು ಬರುತ್ತದೆ. ಈ ತಾಲ್ಲೂಕು ಕೇಂದ್ರವು ತುಮಕೂರು ಜಿಲ್ಲೆಯಲ್ಲಿ ತನ್ನದೇ ಆದ ವಿಶೇಷ ಸ್ಥಾನವನ್ನು ಪಡೆದಿದೆ.[2] ಈ ಪ್ರದೇಶವು ಪ್ರಸಿದ್ಧವೂ, ಐತಿಹಾಸಿಕವೂ ಆದ ಚನ್ನಬಸವೇಶ್ವರ ಜಾತ್ರೆಗೆ ಹೆಸರುವಾಸಿಯಾಗಿದೆ ಹಾಗೂ ಈ ಜಾತ್ರೆಯಲ್ಲಿ ಪ್ರಮುಖ ಪಾತ್ರ ವೀರಶೈವರದ್ದು ಮತ್ತು ಜಾತ್ರೆಯ ರಥ ಕಟ್ಟುವ ಕಾಯಕ ಗಾಣಿಗ ಜನಾಂಗಕ್ಕೆ ಸೇರಿರುತ್ತದೆ.

**ಐತಿಹಾಸಿಕ ಹಿನ್ನೆಲೆ**

ಗುಬ್ಬಿಯು ಐತಿಹಾಸಿಕವಾಗಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಪೂರ್ವಕಾಲದಿಂದಲೂ ಅದು ಸಾಹಿತ್ಯ–ಸಂಸ್ಕೃತಿಯ ಪ್ರತೀಕ ಎನಿಸಿದ್ದು ಆಕರ್ಷಣೀಯ ಕೇಂದ್ರವಾಗಿದೆ. 'ಗುಬ್ಬಿ' ಎಂಬ ಶಬ್ದವನ್ನು ಕೇಳುತ್ತಲೇ ಗುಬ್ಬಚ್ಚಿಯ ಪರಿಕಲ್ಪನೆ ಮೂಡಬಹುದು. 'ಗುಬ್ಬಿ' ಎಂಬ ಹೆಸರು ಬರುವ ಪೂರ್ವದಲ್ಲಿ ಈ ಪ್ರದೇಶವು 'ಅಮರಗೊಂಡ ಕ್ಷೇತ್ರ' ಎಂದು ಕರೆಯಲ್ಪಡುತ್ತಿತ್ತು. ಅಮರಗೊಂಡ ಎಂಬ ಪದವು 'ಅಮೃತಕುಂಡ' ಅಥವಾ 'ಸುಧಾ ಕುಂಡ' ಎಂಬ ಸಂಸ್ಕೃತ ಹೆಸರಿನ ಅಪಭ್ರಂಶ ರೂಪವಾಗಿದೆ. ಅಮರಗೊಂಡ ಮಲ್ಲಿಕಾರ್ಜುನ ಹೆಸರಿನ

[1] *ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು.*

ವೀರಶೈವ ಮಹಾಮಹಿಮರೊಬ್ಬರು ಈ ಸ್ಥಳದಲ್ಲಿ ನೆಲೆಸಿದ್ದರಿಂದ 'ಅಮರಗೊಂಡ' ಎಂಬ ಹೆಸರು ಬಂದಿದೆ.[3]

ಸಾ.ಶ. 1355 ಮತ್ತು 1356ರ ಕಾಲಕ್ಕೆ ಸೇರಿದ ಚಿತ್ರದುರ್ಗದ ಎರಡು ಶಾಸನಗಳಲ್ಲಿ 'ಅಮರಗುಂಡ'ದ ಉಲ್ಲೇಖ ಇದೆ. "ಹಿರಿಯ ಸಿದ್ದಂಣಗಳ ಮಗ ಸೋವಣ್ಣಂಗೆ ಧಾರಾ ಪೂರ್ವಕವಾಗಿ ಧಾರೆಯ ನೆರೆದು ಅಚಂದ್ರಾರ್ಕ ಸ್ಥಾಯಿಯಾಗಿ ಪುರೋಭಿವೃದ್ಧಿಗೆ ಸಲುವಂತಾಗಿ ಕೊಟ್ಟೆವು. ಮಲ್ಲಿನಾಥ ಒಡೆಯರ ಸ್ವಹಸ್ತದ ವೊಪ್ಪ ಶ್ರೀ (ಅ) ಸಮರುಗುಂಡ."[4] ಅಮರಗುಂಡ ದೇವರು ದಿಬ್ಯ ಶ್ರೀಪಾದ ಪದ್ಮಾರಾಧಕನಪ್ಪ ಅಳಿಯ ಸೋಯಂಣ್ನಾಯಕನ ಕೂಮಾರ ಮಲ್ಲಿನಾಥ ಒಡೆಯರು."[5] ಅಮರಗೂಂಡದ ಮಲ್ಲಿಕಾರ್ಜುನರನ್ನು ಶಾಸನ ಹಾಗೂ ವೀರಶೈವ ಸಾಹಿತ್ಯ ಕೃತಿಗಳು ಸ್ತುತಿಸಿವೆ.

'ಅಮರಗೊಂಡ' ಹೆಸರಿಗೆ ಬದಲಾಗಿ 'ಗುಬ್ಬಿ' ಎಂಬ ಹೆಸರು ಬಂದಿರುವುದಕ್ಕೆ ಶಾಸನ ಹಾಗೂ ಕಾವ್ಯಗಳಲ್ಲಿ ಖಚಿತ (ಐತಿಹ್ಯ) ಆಧಾರಗಳಿಲ್ಲ. ಆದರೆ ಕೆಲವು ಪುರಾಣದ ಪ್ರಕಾರ 'ಗುಬ್ಬಿ' ಎಂಬ ಹೆಸರಿನ ಮೂಲವನ್ನು ಹುಡುಕಬಹುದಾಗಿದೆ. ಅಮರಗುಂಡದ ಮಲ್ಲಿಕಾರ್ಜುನ ಮುನಿಗಳು ನಿತ್ಯ ಶಿವಭಕ್ತರಿಗೆ ಪುರಾಣವನ್ನು ಅರ್ಥಸಹಿತವಾಗಿ ತಿಳಿಸುತ್ತಿದ್ದರಂತೆ. ಭಕ್ತವೃಂದದೊಂದಿಗೆ ಎರಡು 'ಗುಬ್ಬಚ್ಚಿ'ಗಳು ಪುರಾಣವನ್ನು ಆಲಿಸುತ್ತಿದ್ದವಂತೆ. ಪುರಾಣ ಸಮಾಪ್ತಿಯ ದಿವಸ ಎರಡೂ ಗುಬ್ಬಚ್ಚಿಗಳು ಅಲ್ಲಿಯೇ ಅಸುನೀಗಿದವಂತೆ. ಅಂದಿನಿಂದ ಅಮರಗೊಂಡ ಕ್ಷೇತ್ರಕ್ಕೆ ಗುಬ್ಬಿ ಎಂದು ಹೆಸರು ಲಭಿಸಿತೆಂದು ಹೇಳುವುದುಂಟು. ಬಹುಶಃ ಅಮರಗೊಂಡ ಮಲ್ಲಿಕಾರ್ಜುನ ದೇವಾಲಯದಲ್ಲಿ 'ಗುಬ್ಬಚ್ಚಿ ಬಸವ'ನ ಶಿಲಾಮೂರ್ತಿ ಇರುವುದನ್ನು ಆಧಾರವಾಗಿಟ್ಟುಕೊಂಡು ಹೆಣೆದಿದ್ದಾರೆ ಎಂದೆನಿಸುತ್ತದೆ.[6] ಆದರೆ ಈ ಜನ ಪ್ರತೀತಿ ಕಥೆಯಲ್ಲಿ ಹುರುಳಿಲ್ಲ ಎಂದೆನಿಸುತ್ತದೆ. ಸಾ.ಶ. 1355ರಲ್ಲಿಯೂ ಗುಬ್ಬಿಯು ಅಮರಗೊಂಡ ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು ಎಂಬುದನ್ನು ಹಿಂದಿನ ಪುಟದಲ್ಲಿ ಉಲ್ಲೇಖಿಸಿದ ಶಾಸನಗಳು ಪ್ರಸ್ತುತಪಡಿಸುತ್ತವೆ.

ಮತ್ತೊಂದು ಪೌರಾಣಿಕ ಕಥೆಯ ಪ್ರಕಾರ ಅಮರಗೊಂಡ ಮಲ್ಲಿಕಾರ್ಜುನ ದೇವಾಲಯವು ಆಧ್ಯಾತ್ಮ ಕೇಂದ್ರವಾಗಿದ್ದು ಅಲ್ಲಿ ಪ್ರತಿನಿತ್ಯ ಧಾರ್ಮಿಕ ಉಪನ್ಯಾಸ, ಪ್ರಸಾದ ವಿನಿಯೋಗ ಮತ್ತಿತರ ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿದ್ದವು. ಅಂತಹ ಸಂದರ್ಭದಲ್ಲಿ ಮಲ್ಲಣ್ಣಾರ್ಯರು ಬಸವ ಪುರಾಣ ಕಾವ್ಯವನ್ನು ಕುರಿತು ಪ್ರವಚನ ನೀಡುತ್ತಿದ್ದರು. ಆ ಭಾಗದ ಶರಣ ಶರಣೆಯರಿಗೆ ಇದೊಂದು ಜನಪ್ರಿಯ ಕಾರ್ಯಕ್ರಮವಾಗಿತ್ತು. ಅಂತಹ ಸಂದರ್ಭದಲ್ಲಿ ಒಂದು ಸಣ್ಣ ಘಟನೆ ನಡೆಯಿತು. ಮಲ್ಲಣ್ಣಾರ್ಯರು ಕುಳಿತು ಪ್ರವಚನ ಮಾಡುತ್ತಿದ್ದ ಎದುರಿಗಿದ್ದ ಕಂಭದ ಮೇಲೆ ಎರಡು ಗುಬ್ಬಚ್ಚಿಗಳು ಕುಳಿತು ಪುರಾಣ ಶ್ರವಣ ಮಾಡುತ್ತಿದ್ದವು. ಪ್ರತಿನಿತ್ಯವೂ ಈ ಪುಟ್ಟ ಹಕ್ಕಿಗಳು ಬಸವ ಪುರಾಣವನ್ನು ತಪ್ಪದೇ ಕೇಳುತ್ತಿದ್ದವು. ಕಾವ್ಯದ ಆರಂಭಕ್ಕೆ ಸರಿಯಾಗಿ ಹಾರಿ ಬಂದು ಕಾವ್ಯ

ಮುಗಿದ ನಂತರ ಹಾರಿ ಹೋಗಿದ್ದವು. ಹಕ್ಕಿಗಳ ಈ ಬಗೆಯ ಕಾವ್ಯ ಕಾಳಜಿಯನ್ನು ಮಲ್ಲಣ್ಣಾರ್ಯರು ಗಮನಿಸುತ್ತಿದ್ದರು. ತಿಂಗಳ ಕಾಲ ವಿಶೇಷ ಪುಣ್ಯ ಕಾವ್ಯದ ಶ್ರವಣ ನಡೆದು ಪುರಾಣ ಸಮಾಪ್ತಿಯ ದಿನ ಬಂತು. ಮಲ್ಲಣ್ಣಾರ್ಯರು ಆ ದಿನ ಪ್ರವಚನ ಮುಗಿಸುತ್ತಾ ಫಲಶ್ರುತಿ ಹೇಳಿದರು. ಮಹಾಮಂಗಳಾರತಿ ಆಗಿ ಪ್ರಸಾದ ವಿನಿಯೋಗವಾಯಿತು. ಆಗ ಎರಡೂ ಹಕ್ಕಿಗಳು ಮಲ್ಲಣ್ಣಾರ್ಯರ ಮುಂದೆ ಹಾರಿ ಬಂದು ಪಾದದ ಬಳಿ ಮಲಗಿದವು. ಮತ್ತೆ ಮೇಲೇಳಲೇ ಇಲ್ಲ. ಹೀಗೆ ಪ್ರಾಣಾರ್ಪಣೆ ಮಾಡಿ ಪಕ್ಷಿ ಜನ್ಮದಿಂದ ಮುಕ್ತಿಯನ್ನು ಪಡೆದವು. ಇದನ್ನು ಕಂಡು ಎಲ್ಲರೂ ಬೆರಗಾದರು. ಶರಣರೆಲ್ಲರೂ ಕೂಡಿ ಪ್ರಾಣಾರ್ಪಣೆ ಮಾಡಿದ ಆ ಗುಬ್ಬಚ್ಚಿಗಳನ್ನು ದೇವಸ್ಥಾನದ ಪ್ರಾಂಗಣದಲ್ಲಿಯೇ ಸಮಾಧಿ ಮಾಡಿ ಅದರ ಮೇಲೆ ಬಸವಣ್ಣನನ್ನು ಪ್ರತಿಷ್ಠಾಪಿಸಿದರು. ಆ ಬಸವಣ್ಣನಿಗೆ ಇಂದಿಗೂ 'ಗುಬ್ಬಿ ಹಕ್ಕಿ ಬಸವಣ್ಣ' ಎಂದು ಕರೆಯಲಾಗುತ್ತಿದೆ.[7] ಗುಬ್ಬಚ್ಚಿ ಭಕ್ತಿ, ಪ್ರಾಣಾರ್ಪಣೆಗಳನ್ನು ಗಮನಿಸಿದ ಅಮರಗೊಂಡರು ಈ ಹಿಂದಿನ ಅಮರಗೊಂಡ ಪುರಕ್ಕೆ 'ಗುಬ್ಬಿ' ಎಂದು ಪುನರ್ ನಾಮಕರಣ ಮಾಡಿದರು. ಅವರೇ ಹಾಗೆ ಕರೆಯುತ್ತಾ ಹೋದರು. ಆ ಹೆಸರಿನಲ್ಲಿ ಗುಬ್ಬಿ ಇಂದು ಪ್ರಸಿದ್ಧವಾಗಿದೆ.

'ಗುಬ್ಬಿ' ಎಂಬ ಹೆಸರು ಪ್ರಾಪ್ತವಾಗಲು ಕಾರಣನಾದ, 'ಅಮರಗೊಂಡ'ಕ್ಕೆ ಬದಲಾಗಿ 'ಗುಬ್ಬಿ' ಎಂಬ ಹೆಸರನ್ನು ಕರೆದ ವ್ಯಕ್ತಿಯಾದ ಮಲ್ಲಣ್ಣನನ್ನು 16ನೇ ಶತಮಾನದಲ್ಲಿದ್ದ 'ಭಾವಚಿಂತಾರತ್ನ' ಮತ್ತು 'ವೀರಶೈವಾಮೃತ' ಮಹಾಪುರಾಣಗಳ ಕರ್ತೃವಾದ ಮಲ್ಲಣ್ಣಾರ್ಯನೇ ಎಂದು ವಿದ್ವಾಂಸರು ಹೇಳುತ್ತಾ ಬಂದಿರುತ್ತಾರೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಈತನ ತಾತನಾದ ಸಾ.ಶ. 1430ರಲ್ಲಿ ಜೀವಿಸಿದ್ದ 'ವಾತುಲಾಗಮ ವ್ಯಾಖ್ಯಾನ' ಮತ್ತು 'ಗಣಭಾಷ್ಯ ರತ್ನಮಾಲೆ'ಗಳ ಕರ್ತೃವಾದ ಮಲ್ಲಣ್ಣನೇ ತನ್ನ ಹೆಸರಿನ ಹಿಂದೆ 'ಗುಬ್ಬಿ' ಎಂಬ ವಿಶೇಷಣವನ್ನು ಸೇರಿಸಿಕೊಂಡಿದ್ದಾನೆ ಎಂಬುದು ಅವನ ಕೃತಿಗಳಿಂದಲೇ ತಿಳಿದುಬರುತ್ತದೆ.[8]

ಮಲ್ಲಣ್ಣಾರ್ಯರ 'ಗಣಭಾಷ್ಯ ರತ್ನಮಾಲೆ' ಕೃತಿಯ ಪ್ರಾರಂಭ ಮತ್ತು ಅಂತ್ಯದಲ್ಲಿ ಕವಿ ಮಲ್ಲಣ್ಣನ ಹೆಸರಿನ ಹಿಂದೆ 'ಗುಬ್ಬಿ' ಎಂಬ ವಿಶೇಷಣದ ಉಲ್ಲೇಖವಿದೆ. ಕೃತಿಯ ಆದಿಭಾಗದಲ್ಲಿ "ಆದ್ಯರ ವಚನಗಳಿಂ ನೂರೊಂದು ಸ್ಥಲಮಾಗೆ ಸೇರಿಸಿದ ಹರಶರಣರಣುಗಂ ಗುಬ್ಬಿಯ ಮಲ್ಲಣಂಗಳು ಮಾಡಿದ ಭಾಷ್ಯ ರತ್ನಮಾಲೆ" ಎಂದಿದೆ. ಕೃತಿಯ ಅಂತ್ಯದಲ್ಲಿ "ಬಸವರಾಜ ದೇವರು ಚಂನಬಸವರಾಜ ದೇವರು ಪ್ರಭುದೇವರು ಮುಖವಾದ ಅಸಂಖ್ಯ ಮಹಾಗಣಂಗಳು ನೂರೊಂದು ಸ್ಥಲದಲ್ಲಿ ನಡೆದು ನುಡಿದ ವಚನಂಗಳು ಸ್ಥಲಭಿಂನವಾಗಿರ್ದಡೆ ಚಂದವಲ್ಲೆಂದು ಕಂಠಮಾಲೆಯ ಪೋಹಣಿಗೆಯರೆದು ಸೇರಿಸಿದನು ಗುಬ್ಬಿಯ ಮಲ್ಲಣಂಗಳು" ಎಂದಿದೆ.[9]

ಈ ಮೇಲಿನ ಹೇಳಿಕೆಯಿಂದ ಮೊದಲನೇ ಮಲ್ಲಣನೇ ತನ್ನ ಹೆಸರಿನ ಹಿಂದೆ 'ಗುಬ್ಬಿ' ಹೆಸರಿನ ವಿಶೇಷಣವನ್ನು ಸೇರಿಸಿಕೊಂಡಿದ್ದಾನೆ ಎಂಬುದು ವಿಧಿತವಾಗುತ್ತದೆ. ಮೊದಲನೇ ಗುಬ್ಬಿ

ಮಲ್ಲಣನ ಕಾಲವನ್ನು ಸಾ.ಶ. 1475 ಎಂದು ಹೇಳುತ್ತಾ ಬಂದಿರುತ್ತಾರೆ. ಆದರೆ ಸಾ.ಶ. 1440ರಲ್ಲಿದ್ದ ಲಕ್ಕಣ್ಣ ದಂಡೇಶನು ತನ್ನ 'ಶಿವತತ್ವ ಚಿಂತಾಮಣಿ'ಯಲ್ಲಿ ಮಲ್ಲಣನನ್ನು ಸ್ಮರಿಸಿದ್ದಾನೆ. ಇದರಿಂದ ಮಲ್ಲಣನ ಕಾಲ ಸಾ.ಶ. 1430 ಎಂದು ಭಾವಿಸಬಹುದಾಗಿದೆ.[10] ಗುಬ್ಬಿಯ ಹೆಸರು ಅಮರಗೊಂಡಕ್ಕೆ ಬದಲಾಗಿ ಬರಲು ಪ್ರೇರಕವಾದ ಜನಜನಿತವಾದ ಕಥೆಗೆ ನೈಜತೆಯ ನಿಟ್ಟಿನಲ್ಲಿ ನಾವು ಭಾವಿಸಿದರೆ ಅದು 16ನೇ ಶತಮಾನಕ್ಕೆ ಬದಲಾಗಿ 15ನೇ ಶತಮಾನದ ಪೂರ್ವಾರ್ಧದಲ್ಲಿ ನಡೆದಿರಬೇಕೆಂದೆನಿಸುತ್ತದೆ.

15ನೇ ಶತಮಾನಕ್ಕೆ ಸೇರಿದ್ದೆಂದು ಹೇಳಲಾದ ಶಾಸನವೊಂದರಲ್ಲಿ 'ಗುಬ್ಬಿ'ಯ ಉಲ್ಲೇಖ ಇದೆ. "ನಾಡಪ್ರಭು ಮಸಣಿಗವುದನವರ ಮಕ್ಕಳು ರಾಮಂಣ ಮಸಣಪನವರಿಗೆ ಗುಬ್ಬಿಯ ಸ್ಥಳದ ಧೂಳಿನ ಹಳಿಯನು ಕೂಡಗಿಯಾಗಿ......" ಎಂದಿದೆ. 15ನೆ ಶತಮಾನದ ನಂತರದ ವೀರಶೈವ ಸಾಹಿತ್ಯ ಕೃತಿಗಳಲ್ಲಿ ಗುಬ್ಬಿಯ ಹೆಸರು ಉಲ್ಲೇಖವಾಗಿದೆ. ಗುಬ್ಬಿ ಹೆಸರನ್ನು ಸಂಸ್ಕೃತದಲ್ಲಿ 'ಚಟಕಪುರಿ' ಎಂದು ಕರೆದಿದ್ದಾರೆ.[11] (ಚಟಕ = ಗುಬ್ಬಿ ಹಕ್ಕಿ)

ತುಮಕೂರು ಜಿಲ್ಲೆಯ ಪ್ರಾಚೀನ ಇತಿಹಾಸ ಪರಂಪರೆಯು ಶಿಲಾಯುಗದಿಂದಲೇ ಪ್ರಾರಂಭವಾಗಿದೆ ಎಂಬುದು ಇತ್ತೀಚಿನ ಭೂಗರ್ಭ ಶೋಧನೆಯಿಂದ ತಿಳಿದು ಬಂದಿದೆ. ಗುಬ್ಬಿ ಪ್ರಾಂತ್ಯದ ಕಿಬ್ಬನಹಳ್ಳಿ, ಬಿಳಿಗೆರೆ, ಬಾಣಸಂದ್ರ, ಬೆಟ್ಟದ ಸಾಲು ಹಾಗೂ ನಿಟ್ಟೂರಿನಲ್ಲಿ ಕೆಲವು ಹಳೆ ಶಿಲಾಯುಗದ ಅವಶೇಷಗಳು ದೊರೆತಿವೆ. ಭೂಗರ್ಭ ಸಂಶೋಧಕರ ಪ್ರಕಾರ ಈ ಗುಡ್ಡಗಾಡಿನ ಕಣಿವೆ ಬಯಲಿನಲ್ಲಿ ಅಪಾರ ಜಲವಸತಿ ಇದ್ದುದರಿಂದ ಪ್ರಾಚೀನ ಮಾನವನು ಇಲ್ಲಿ ನೆಲೆಸಿದ್ದನೆಂದು ತಿಳಿದು ಬರುತ್ತದೆ.[12] ಅಲ್ಲದೆ ಅವನಿಗೆ ಉಪಯುಕ್ತವಾಗಿದ್ದ ಆಯುಧಗಳನ್ನು ತಯಾರಿಸಿಕೊಳ್ಳಲು ಯೋಗ್ಯವಾದ ಹರಳು ಜೋಡಣೆಯ ಬೆಣಚುಕಲ್ಲು ಜಾತಿಯ ಕಬ್ಬಿ ಕಲ್ಲುಗಳು ಈ ಪ್ರದೇಶದಲ್ಲಿ ಹೇರಳವಾಗಿ ದೊರೆಯುತ್ತಿದ್ದರಿಂದ ನೆಲೆಗೊಳ್ಳಲು ಕಾರಣವಾಯಿತು ಎಂಬುದಾಗಿದೆ. ಗುಬ್ಬಿಯ ಕೆಲ ಭಾಗವಾದರೂ ಶಿಲಾಯುಗದ ಇತಿಹಾಸಕ್ಕೆ ಸೇರ್ಪಡೆಯಾಗಿದೆ ಎಂಬುದು ವ್ಯಕ್ತವಾಗುತ್ತದೆ. ಪ್ರಸ್ತುತ ಲೇಖನದಲ್ಲಿ ಗುಬ್ಬಿ ತಾಲೂಕಿನ ರಾಜಕೀಯ ಹಿನ್ನಲೆ ಮತ್ತು ಇತಿಹಾಸ ಮತ್ತು ಅದರ ಅಗತ್ಯತೆಯನ್ನು ವಿಮರ್ಶಿಸಲಾಗಿದೆ.

**ಗುಬ್ಬಿ ತಾಲೂಕಿನ ರಾಜಕೀಯ ಚರಿತ್ರೆ**

ಗುಬ್ಬಿ ಪ್ರಾಂತ್ಯವನ್ನು ಪ್ರಮುಖ ರಾಜಮನೆತನಗಳು ಪರೋಕ್ಷವಾಗಿ ಆಳಿದ್ದರೆ ಹಲವಾರು ಪಾಳೆಗಾರರು ಪಾಳೆಯಪಟ್ಟುಗಳನ್ನು ನಿರ್ಮಿಸಿ ಆಳ್ವಿಕೆ ನಡೆಸಿದವರಾಗಿದ್ದಾರೆ. ಪ್ರಪ್ರಥಮವಾಗಿ ಈ ಭಾಗವು ಗಂಗರ ಆಳ್ವಿಕೆಗೆ ಒಳಪಟ್ಟಿತ್ತು ಎಂಬ ವಿಷಯವು ಅವರ ಕಾಲದ ಶಾಸನಗಳಿಂದ ತಿಳಿದು ಬರುತ್ತದೆ. ಸಾ.ಶ. 400ರ ವೇಳೆಗೆ ಗಂಗರ ಆಧಿಪತ್ಯಕ್ಕೆ ಇದು ಒಳಪಟ್ಟಿತ್ತು ಎಂಬುದನ್ನು ದೊರೆತ ಐದು ತಾಮ್ರ ಶಾಸನಗಳು ಉಲ್ಲೇಖಿಸುತ್ತವೆ.

ಈ ಪ್ರಾಂತವನ್ನು ಆಳಿದ ಗಂಗರಸರಲ್ಲಿ ಶ್ರೀಪುರುಷನೇ ಮೊದಲನೆಯವನು. ಈತನ ಕಾಲಕ್ಕೆ ಸೇರಿದ ಶಾಸನ ಹಾಗೂ ವೀರಗಲ್ಲುಗಳು ದೊರೆತಿವೆ. ಗಂಗರಿಗೂ ರಾಷ್ಟ್ರಕೂಟರಿಗೂ ಹಲವಾರು ಬಾರಿ ಯುದ್ಧಗಳು ಪಿಂಚನೂರು, ಕಾಗಿ ಮೊಗೆಯೂರು, ಬಾಗೆಯೂರುಗಳ ಬಳಿ ನಡೆದವು. ಗುಬ್ಬಿಗೆ ಈಶಾನ್ಯದ ಕಡೆಗೆ ಸುಮಾರು ಐದು ಮೈಲಿಗಳ ದೂರದಲ್ಲಿ ಇರುವ "ಬಾಗೂರು" ಎಂಬುದು ಉಭಯರಿಗೂ ನಡೆದ ಯುದ್ಧದ ಸ್ಥಳವಾದ ಬಾಗೆಯೂರು ಆಗಿರಬಹುದೆಂದು ವಿದ್ವಾಂಸರ ಅಭಿಮತ. ಗುಬ್ಬಿ ಪ್ರಾಂತದ ಸಮೀಪದ ಕಿಬ್ಬನಹಳ್ಳಿಯ ಸಾ.ಶ. 972ರ 103ನೇ ಶಾಸನವು ಗಂಗರ ಪ್ರಾಬಲ್ಯವನ್ನು ಹಾಗೂ ನೊಳಂಬರ ಅವನತಿಯ ವಿವರವನ್ನು ಹೊರಗೆಡಹುತ್ತದೆ.[13] ಆದರೆ ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಈ ಭಾಗ ಒಳಪಟ್ಟಿಲ್ಲವೆಂದು ಹೇಳಬಹುದು. ಏಕೆಂದರೆ ಅವರ ಕಾಲದ ಯಾವುದೇ ಶಾಸನಗಳು ಇದುವರೆಗೂ ಉಪಲಬ್ಧವಿಲ್ಲ.

ಆದರೆ ಸಾ.ಶ. 753ರಿಂದ ಸಾ.ಶ 937ರ ವರೆವಿಗೂ ಆಳಿದ ರಾಷ್ಟ್ರಕೂಟರ ಆಳ್ವಿಕೆಗೆ ಈ ಪ್ರಾಂತ್ಯವು ಒಳಪಟ್ಟಿತ್ತು ಎಂಬುದನ್ನು ದೊರೆತ ಮೂರು ಶಾಸನಗಳು ತಿಳಿಸುತ್ತವೆ. ಈ ಮೂರು ಶಾಸನಗಳಲ್ಲಿ ಗುಬ್ಬಿಯ 91ನೇ ಶಾಸನವು ಇತಿಹಾಸ ಪ್ರಾಮುಖ್ಯತೆಯನ್ನು ಪಡೆದಿದೆ. ಸಾ.ಶ. 756ರಿಂದ 774ರ ವರೆವಿಗೂ ಆಳಿದ ಅಕಾಲವರ್ಷ (ಒಂದನೇ ಕೃಷ್ಣ) ನು ಕಟ್ಟಿಸಿದ ದೇವಾಲಯದ ವಿವರ ಇದೆ. ದೇವಾಲಯವನ್ನು ದೊರೆಯು ತನ್ನ ಹೆಸರಾದ "ಕನ್ನೇಶ್ವರ" ಎಂಬ ಹೆಸರಿನಿಂದ (ಕನ್ನ=ಕೃಷ್ಣ) ಕರೆದುದಾಗಿ ತಿಳಿದು ಬರುತ್ತದೆ. ಮತ್ತೊಂದು ಮಹತ್ವದ ಸಂಗತಿ ಎಂದರೆ ಒಂದನೇ ಕೃಷ್ಣನು ಆನೆಯ ಮೇಲೆ ಕುಳಿತು ನದಿ ಪ್ರದೇಶದಲ್ಲಿ ನಡೆದ ಯುದ್ಧರಂಗಕ್ಕೆ ಹೋಗಿದ್ದಾಗ ಬಿರುಗಾಳಿ ಹಾಗೂ ಅಲೆಗಳ ಭೋರ್ಗರೆತಕ್ಕೆ ಗುರಿಯಾಗಿ ಯುದ್ಧದ ದೋಣಿಗಳೂ ಆನೆಗಳೂ ನಾಶವಾದವೆಂದು ತಿಳಿದು ಬರುತ್ತದೆ.

ತುಮಕೂರು ಜಿಲ್ಲೆಯಲ್ಲಿ ಕಲ್ಯಾಣ ಚಾಲುಕ್ಯರನ್ನು ಕುರಿತ ಶಾಸನಗಳು ಹೇರಳವಾಗಿ ದೊರೆತಿದ್ದರೂ ಗುಬ್ಬಿ ಪ್ರಾಂತದಲ್ಲಿ ಅಪರೂಪಕ್ಕೆ ಒಂದು ಶಾಸನ ಮಾತ್ರ ದೊರೆತಿದೆ. ಇಲ್ಲಿ ಕಲ್ಯಾಣ ಚಾಲುಕ್ಯರು ಪ್ರಬಲರಾಗಿ ಆಳಿದರು ಎಂಬುದು ಈ ಶಾಸನ ಮತ್ತು ಬೇರೆ ಪ್ರಾಂತದ ಇತರೆ ಶಾಸನಗಳಿಂದ ವ್ಯಕ್ತವಾಗುತ್ತದೆ.

ರಾಷ್ಟ್ರಕೂಟ ಅಥವಾ ಚಾಲುಕ್ಯರ ಶಾಸನಗಳಲ್ಲದೆ ಹೊಯ್ಸಳ ಕಾಲದ ಶಾಸನಗಳು ಕೂಡ ತಾಲೂಕಿನಲ್ಲಿ ದೊರೆತಿವೆ. ಪ್ರಾರಂಭದ ದೊರೆಗಳ ಬಗೆಗಿನ ಉಲ್ಲೇಖ ಈ ಶಾಸನಗಳಲ್ಲಿ ಇರದಿದ್ದರೂ ಹೊಯ್ಸಳ ದೊರೆಗಳಲ್ಲಿ ಪ್ರಖ್ಯಾತನಾದ ವಿಷ್ಣುವರ್ಧನ ಹಾಗೂ ವೀರಬಲ್ಲಾಳರನ್ನು ಕುರಿತು ಉಲ್ಲೇಖವಿದೆ. ಸಾ.ಶ. 1134ರ ಗುಬ್ಬಿಯ 34ನೇ ಶಾಸನವು ವಿಷ್ಣುವರ್ಧನನ ಕಾಲಕ್ಕೆ ಸಂಬಂಧಿಸಿದ್ದುದಾಗಿದ್ದು ಗುಬ್ಬಿ ಪ್ರಾಂತದ ಇಡಗೂರು ಸುತ್ತಲ ಪ್ರದೇಶವನ್ನು ಆಳಿದ ಪಾಳೇಗಾರರ, ಅಧಿಪತಿಗಳ ವಿಷಯವನ್ನು ತಿಳಿಸುತ್ತವೆ. ಇಮ್ಮಡಿ ನರಸಿಂಹನ ಕಾಲದ ಮೂರು ಶಾಸನಗಳು

ದೊರೆತಿವೆ. ಸಾ.ಶ. 1233ರ ಗುಬ್ಬಿಯ 45ನೇ ಶಾಸನವು ಈತನು ದ್ವಾರಸಮುದ್ರದಲ್ಲಿದ್ದು ರಾಜ್ಯವಾಳಿದನೆಂದು ತಿಳಿಸುತ್ತದೆ. ಸಾ.ಶ. 1226ರ ಗುಬ್ಬಿಯ 11ನೇ ಶಾಸನವು ನಾಗಣ್ಣನೆಂಬ ಅಧಿಕಾರಿಯ ವಿಷಯ ತಿಳಿಸುತ್ತದೆ. ಈತನು ದೊರೆಯ ಹಿರಿಯ ರಾಣಿಯರಾದ 'ಪದ್ಮಲ ಮಹಾದೇವಿ'ಯವರ ಅಂತಃಪುರದಲ್ಲಿ ಆಪ್ತಮಂತ್ರಾಲೋಚನಾ ಸಭೆಯ ಮುಖ್ಯಾಧಿಕಾರಿಯಾಗಿದ್ದನು. ಸಾ.ಶ. 1254ರಿಂದ 1295ರವರೆಗೂ ಆಳಿದ ರಾಮನಾಥನನ್ನು ಕುರಿತ ಮಾಹಿತಿಗಳು ಗುಬ್ಬಿ ಹಾಗೂ ಇತರ ಕಡೆಗಳಲ್ಲಿ ದೊರೆತಿದ್ದು ಅವುಗಳ ಪ್ರಕಾರ ಇವು ಈತನ ಅಧೀನಕ್ಕೆ ಒಳಪಟ್ಟ ಪ್ರಾಂತಗಳಾಗಿದ್ದವೆಂದು ತಿಳಿದು ಬರುತ್ತದೆ. ಮುಮ್ಮಡಿ ಬಲ್ಲಾಳ (ಸಾ.ಶ. 1292–1342)ನ ಕಾಲದಲ್ಲಿಯೂ ಈ ಪ್ರಾಂತವು ಆತನ ಅಧೀನಕ್ಕೆ ಒಳಪಟ್ಟಿತ್ತು. ಸಾ.ಶ. 1331ರ ಗುಬ್ಬಿಯ 30ನೇ ಶಾಸನವು ಈತನ ರಾಜಧಾನಿ ದ್ವಾರಸಮುದ್ರವು ಮುಸಲ್ಮಾನರ ದಾಳಿಯಿಂದ ನಾಶವಾಯಿತೆಂದು, ರಾಜನು ಅಲ್ಲಿಂದ ಬಂದು ಹೊಸದುರ್ಗದಲ್ಲಿ ನೆಲೆನಿಂತನೆಂದು ಹೇಳಿದೆ.

ಹೊಯ್ಸಳರ ಅವನತಿಯ ನಂತರ 1346ರಿಂದ 1356ರವರೆವಿಗೂ ನಡೆದ ಪ್ರಬಲ ಚಟುವಟಿಕೆಗಳಿಂದ ತುಮಕೂರು ಜಿಲ್ಲೆಯನ್ನೊಳಗೊಂಡ ಹೊಯ್ಸಳ ರಾಜ್ಯವು ವಿಜಯನಗರ ಸಾಮ್ರಾಜ್ಯದೊಡನೆ ವಿಲೀನಗೊಂಡರೂ ಆ ಕಾಲದ ವಿಷಯವನ್ನು ಹೊರಗೆಡಹುವ ಯಾವುದೇ ಶಾಸನವಾಗಲೀ ಇತರೆ ಆಕರಗಳಾಗಲಿ ಈ ಪ್ರಾಂತದಲ್ಲಿ ದೊರೆತಿಲ್ಲ. ಸಾ.ಶ. 1377ರಿಂದ 1404ರವರೆಗೂ ಆಳಿದ ಇಮ್ಮಡಿ ಹರಿಹರನ ಕಾಲದ ಶಾಸನಗಳು ತುಮಕೂರು ಪ್ರಾಂತದಲ್ಲಿ ದೊರೆಯುತ್ತವೆ. ಸಾ.ಶ. 1403ರ ಶಿರಾದ 95ನೇ ಶಾಸನದಲ್ಲಿನ ವಿವರದ ಪ್ರಕಾರ ಇಮ್ಮಡಿ ಹರಿಹರನು ಒಂದು ಗ್ರಾಮವನ್ನು ನಿರ್ಮಾಣ ಮಾಡಿಸಿ ಕಾಡು ಪ್ರಾಂತದಲ್ಲಿ ಒಂದು ದೊಡ್ಡ ಕೆರೆಯನ್ನು ಕಟ್ಟಿಸಿದನೆಂದು ತಿಳಿದು ಬರುತ್ತದೆ. ಈ ಗ್ರಾಮ ಮತ್ತು ಕೆರೆಗಳು ಗುಬ್ಬಿ ಪ್ರಾಂತದ ಚೇಳೂರು ನಾಡಿನ ಸೀಬೂರು ಗ್ರಾಮದ ಗಡಿ ಪ್ರಾಂತದಲ್ಲಿ 'ಆನೆಬಿದ್ದ ಜರಿಗೆ'ಯ ಪಶ್ಚಿಮದ ಕಡೆಗೆ ಇವೆ. ಹರಿಹರರಾಯಪುರವೆಂದೇ ಈಗಲೂ ಕರೆಯುತ್ತಾರೆ.

ಎರಡನೇ ವಿರೂಪಾಕ್ಷನನ್ನು ಗುಬ್ಬಿಯ 39ನೇ ಶಾಸನವು ಉಲ್ಲೇಖ ಮಾಡಿದೆ. ಈ ಶಾಸನದ ಪ್ರಕಾರ ದೊರೆಗೆ ಒಬ್ಬ ಮಹಾಮಂತ್ರಿ ಇದ್ದನೆಂದು, ಆತನು ಉತ್ತಮ ಆಡಳಿತಗಾರನಾಗಿದ್ದನೆಂದು ತಿಳಿದು ಬರುತ್ತದೆ. ಸಾಳುವ ಮನೆತನದ ದೊರೆಗಳ ಶಾಸನಗಳು ಕೇವಲ ಎರಡು ಅಥವಾ ಮೂರು ತುಮಕೂರು ಪ್ರಾಂತದಲ್ಲಿ ದೊರೆತಿವೆ. ಗುಬ್ಬಿ ಪ್ರಾಂತದಲ್ಲಿ ವಿಜಯ ನಗರದ ಅರಸರ ಬಗೆಗೆ ಶಾಸನಗಳು ಉಪಲಬ್ಧವಿಲ್ಲದಿದ್ದರೂ ತುಮಕೂರಿನ ಇತರ ಭಾಗಗಳಲ್ಲಿ ದೊರೆತಿರುವುದರಿಂದ ಈ ಭಾಗವು ಪರೋಕ್ಷವಾಗಿ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದಾಗಿ ಭಾವಿಸಬಹುದು.

**ಪಾಳೆಯಗಾರರ ಆಡಳಿತ**

ಪ್ರಮುಖ ರಾಜಮನೆತನಗಳ ಜೊತೆಗೆ ಅವರ ಸಮಕಾಲೀನರಾಗಿ ಕೆಲವು ಸಣ್ಣ ಪುಟ್ಟ ರಾಜಮನೆತನಗಳು ಸಾಮಂತರಾಗಿಯೋ ಅಧೀನರಾಗಿಯೋ ಆಳಿದ್ದಾರೆ. ಅವರಲ್ಲಿ ನೊಳಂಬ ರಾಜರು ಪ್ರಮುಖರು. ಇವರ ರಾಜ್ಯವು 32000 ವರಹಗಳ ನೊಳಂಬವಾಡಿ ಎಂದೇ ಹೆಸರಾಗಿದ್ದಿತು. ಇವರ ರಾಜಧಾನಿ ಹೆಂಜೇರು. (ಈಗಿನ ಆಂಧ್ರ ಪ್ರದೇಶಕ್ಕೆ ಸೇರಿದ ಅನಂತಪುರ ಜಿಲ್ಲೆಯ ಮಡಕ ಶಿರಾ ತಾಲೂಕಿನ ಹೇಮಾವತಿ) ಪ್ರಾಚೀನ ನೊಳಂಬರು ತುಮಕೂರು ಜಿಲ್ಲೆಯ ಶಿರಾ, ಮಧುಗಿರಿ, ಪಾವಗಡ ತಾಲೂಕುಗಳಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದರು.

**ಅರ್ವಾಚೀನ ನೊಳಂಬರು ಅಥವಾ ಗುಬ್ಬಿ ಹೊಸಹಳ್ಳಿಯ ಪಾಳೆಗಾರರು**

ಗುಬ್ಬಿ ಪ್ರಾಂತದಲ್ಲಿ ಹಾಗೂ ಮಧುಗಿರಿ ಪ್ರಾಂತದಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ್ದರು. ಅರ್ವಾಚೀನ ನೊಳಂಬರ ಕಾಲ ಸುಮಾರು ಹದಿಮೂರನೆ ಶತಮಾನ ಎಂದಿಟ್ಟುಕೊಳ್ಳಬಹುದು. ತುರುಬಿನ ಮಾರೇಗೌಡ ಹಾಗೂ ಆರು ಮಂದಿ ಸಹೋದರರು ಸೊನ್ನಲಿಗೆ 'ಸಿದ್ಧರಾಮೇಶ್ವರ' ಸ್ವಾಮಿಗಳ ಕೃಪಾಶೀರ್ವಾದ ಮತ್ತು ಏಳು ಬಂಡಿ ದ್ರವ್ಯಗಳನ್ನು ಪಡೆದು ದಕ್ಷಿಣ ಭಾಗಕ್ಕೆ ಪಯಣಿಸಿದರು. ವಿಜಯನಗರದ ಅರಸರ ಕೃಪೆಗೆ ಪಾತ್ರರಾಗಿ ಅಲ್ಲಿಂದ ಹೊರಟು ಸಾಗಿ ಬರುತ್ತಾ 'ತುಂಗವಟಿ' ಎಂಬ ಪಟ್ಟಣಕ್ಕೆ ಬಂದರು. ಅಲ್ಲಿ ಕೆಲವು ಕಾಲ ತಂಗಿದ್ದು ಆತಿಥ್ಯ ಸ್ವೀಕರಿಸಿದ ನಂತರ ರಾಜ್ಯ ಸ್ಥಾಪಿಸುವ ಆಕಾಂಕ್ಷೆಯಿಂದ ಸಾ.ಶ. 1346ರಲ್ಲಿ ಏಳು ಜನರು ಸೇರಿ ಪ್ರಪ್ರಥಮವಾಗಿ ನಗರ ನಿರ್ಮಾಣ ಮಾಡಿ ಕೋಟೆ ಕಟ್ಟಿಸಿ ಅದಕ್ಕೆ 'ಕೋರಾ' ಎಂಬುದಾಗಿ ಹೆಸರಿಟ್ಟರು. ಕೆಲವು ಕಾಲದ ನಂತರ ಈ ಸಹೋದರರು ಸ್ವತಂತ್ರವಾಗಿ ರಾಜ್ಯ ಕಟ್ಟಿ ಆಳಬೇಕೆಂಬ ಆಕಾಂಕ್ಷೆಯಿಂದ ನಾಲ್ಕು ದಿಕ್ಕುಗಳಲ್ಲಿಯೂ ಪ್ರಯಾಣ ಹೊರಟರು. ಈ ಸಹೋದರರಲ್ಲಿ ಮೂರನೆಯವರಾದ ಕಾಳಚಿಕ್ಕಪ್ಪಗೌಡರು ಗುಬ್ಬಿ ಹೊಸಹಳ್ಳಿಯಲ್ಲಿ ಪಾಳೆಯಪಟ್ಟನ್ನು ನಿರ್ಮಿಸುತ್ತಾರೆ. ಇವರು ಮಹಾನಾಡಪ್ರಭುಗಳಲ್ಲಿ ಒಬ್ಬರು. ಗುಬ್ಬಿ ಪೇಟೆಯನ್ನು ನಿರ್ಮಾಣ ಮಾಡಿದವರು ಇವರೇ. ತುಮಕೂರಿನ 7ನೇ ಶಾಸನವು ಹೊಸಹಳ್ಳಿ ಪಾಳೆಗಾರರ ಪರಂಪರೆಯ ನಾಯಕರನ್ನು ಉಲ್ಲೇಖಿಸುತ್ತದೆ.

ಮುಮ್ಮಡಿ ಹೊಂನಪ್ಪಗೌಡ
|
ತೋಟಪ್ಪಗೌಡ
|
ಮುಮ್ಮಡಿ ಹೊಂನಪ್ಪಗೌಡ

ಕಾಳಚಿಕ್ಕಪ್ಪಗೌಡರ ನಂತರ ಹೊನ್ನಪ್ಪನಾಯಕ ಗೌಡರು ಪ್ರಧಾನ ಅಧಿಕಾರಿ ಎಂಬ ಸನ್ನದನ್ನು ಹೊಂದಿ ಮೂರು ಸಾವಿರ ಪಗೋಡಗಳ ಜಮೀನನ್ನು ಉಂಬಳಿಯಾಗಿ ಪಡೆದು ಮೈಸೂರು ಒಡೆಯರಿಗೆ ಅಧೀನರಾಗಿ ಆಳುತ್ತಿದ್ದರು. ಹೈದರಾಲಿಯ ಕಾಲದಲ್ಲಿ ಈ ನಾಡಿನಿಂದ 500 ನಾಣ್ಯಗಳ ಕಪ್ಪವು ಮೈಸೂರು ಸಂಸ್ಥಾನಕ್ಕೆ ಸಲ್ಲುತ್ತಿತ್ತು. ಟಿಪ್ಪು ಸುಲ್ತಾನನು ಕಪ್ಪ ಮತ್ತು ಉಂಬಳಿಯನ್ನು ಒಟ್ಟಿಗೆ ರದ್ದುಪಡಿಸಿ ತನ್ನ ಕಕ್ಷೆಗೆ ಸೇರಿಸಿಕೊಂಡನು. ಈಗಲೂ ಈ ಪಾಳೆಗಾರರ ವಂಶಸ್ಥರು ಗುಬ್ಬಿ ಹೊಸಹಳ್ಳಿಯಲ್ಲಿ ಇದ್ದಾರೆ. ಹದಿನೆಂಟನೆಯ ಶತಮಾನಕ್ಕೆ ಸೇರಿದ ಅಜ್ಞಾತ ಕವಿಯೊಬ್ಬ ರಚಿಸಿರುವ 'ಬತ್ತೀಸಪುತ್ತಳಿ ಕಥೆ' ಕೃತಿಯ ಆರಂಭದಲ್ಲಿನ ವಿವರದಲ್ಲಿ " ................ ಶಿವಾಜ್ಞೆಯಿಂ ಗುಬ್ಬಿ ಭೂಪನಿಗೆ ಈ ಕಥೆಪೇಳ್ದಂ" ಎಂಬ ಅಂಶ ಇದೆ. ಕವಿಯು ಗುಬ್ಬಿ ಭೂಪನ ಹೆಸರನ್ನು ತಿಳಿಸಿಲ್ಲ, ಆದರೆ ಈ ಗುಬ್ಬಿಯ ಭೂಪನು ಅದೇ ಕಾಲಕ್ಕೆ ಸೇರಿದ ಗುಬ್ಬಿಯ ಪಾಳೆಯಗಾರರಲ್ಲಿ ಒಬ್ಬನಾಗಿರಬೇಕು. ಬಹುಶಃ ತೋಟಪ್ಪಗೌಡರ ಮಗ ಮುಮ್ಮಡಿ ಹೊನ್ನಪ್ಪಗೌಡರೆ ಗುಬ್ಬಿ ಭೂಪರಾಗಿದ್ದರು ಎಂದು ಊಹೆ ಮಾಡಲು ಅವಕಾಶ ಇದೆ. ಹೊಸಹಳ್ಳಿಯ ಪಾಳೆಯಗಾರರು ಸಾಹಿತ್ಯ ಪೋಷಕರು ಎಂಬುದು ವ್ಯಕ್ತವಾಗುತ್ತದೆ. ಈ ಮನೆತನಕ್ಕೆ ಗೋಸಲ ಚನ್ನಬಸವೇಶ್ವರರೆಂಬ ವೀರಶೈವ ಪುರುಷರು ರಾಜಗುರುಗಳಾಗಿದ್ದರು. ಇವರಿಗೆ ಪಾಳೆಗಾರರು ಅತ್ಯಂತ ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತಿದ್ದರು.[14]

**ಹಾಗಲವಾಡಿ ಪಾಳೆಯಗಾರರು**

ಇವರು ವಿಜಯನಗರ ದೊರೆಗಳ ಅಧೀನರಾಗಿ ಸುಮಾರು ನೂರು ವರ್ಷಗಳ ಕಾಲವೂ, ನಂತರ ಸ್ವತಂತ್ರವಾಗಿಯೂ ಆಳಿದರು. "ಏರಿಮಾದನಾಯಕ" ಎಂಬುವನು ಸಾ.ಶ. 1478ರಲ್ಲಿ ಈ ಪಾಳೆಯಪಟ್ಟನ್ನು ಸ್ಥಾಪಿಸಿದನು. ಸಾಲಿನಾಯಕ, ಚಿಕ್ಕನಾಯಕ, ಬೈರನಾಯಕ ಮುಂತಾದವರು ಇವನ ನಂತರ ಕಾಲಾನುಕ್ರಮದಲ್ಲಿ ಆಳಿದರು. ಈ ವಂಶದ ಕೊನೆಯವನಾದ ಚನ್ನಬಸವನಾಯಕನ ಕಾಲದಲ್ಲಿ ಹೈದರಾಲಿಯ ದಾಳಿಯಿಂದ ಹಾಗಲವಾಡಿ ಪಾಳೆಯಪಟ್ಟು ಮೈಸೂರು ರಾಜ್ಯದೊಂದಿಗೆ ವಿಲೀನವಾಯಿತು. ಇವರು ತುಮಕೂರು ಜಿಲ್ಲೆಯ ಹೆಚ್ಚಿನ ಭಾಗವನ್ನು ತಮ್ಮ ಕಕ್ಷೆಗೆ ಸೇರಿಸಿಕೊಂಡಿದ್ದರು. ಈ ಪಾಳೆಯಗಾರರು ವೀರರೂ, ಧರ್ಮಾಭಿಮಾನಿಗಳೂ ಆಗಿದ್ದು ಜನಹಿತ ಕಾರ್ಯವನ್ನು ಮಾಡಿ ಜನಪ್ರಿಯರಾಗಿದ್ದರು.

**ಮೈಸೂರು ಒಡೆಯರ ಆಳ್ವಿಕೆ**

1800ರ ನಂತರ ಮೈಸೂರಿನ ಅರಸರಾದ ಮುಮ್ಮಡಿ ಒಡೆಯರ ಕಾಲದಲ್ಲಿ ಫೌಜುದಾರರಾದ ಬೋರೇಗೌಡರು ಗುಬ್ಬಿಯ ಅಭಿವೃದ್ಧಿಯ ಕಾರ್ಯಗಳಲ್ಲಿ ಮಹತ್ತರ ಪಾತ್ರವಹಿಸಿ ನಿಷ್ಠೆ ಮತ್ತು ಸಾಹಸದಿಂದ ದೊರೆಗಳ ಅನುಗ್ರಹಕ್ಕೆ ಪಾತ್ರರಾದರು. ಮೈಸೂರು ಅರಸರ ಕಾಲದಲ್ಲಿ ಮೈಸೂರು

ಸಂಸ್ಥಾನವು ಆರು ಪೌಜುದಾರಿಗಳಾಗಿ ವಿಭಾಗಿಸಲ್ಪಟ್ಟು ಗುಬ್ಬಿಯು ಮದ್ದಗಿರಿ ಪೌಜುದಾರಿಯ ಒಂದು ಭಾಗವಾಗಿತ್ತು. 1834ರಲ್ಲಿ ಪೌಜುದಾರಿಗಳು ಪುನರ್ವಿಂಗಡಣೆಗೊಂಡು ಬೆಂಗಳೂರು ವಿಭಾಗ, ನಗರ ವಿಭಾಗ, ಚಿತ್ರದುರ್ಗ ವಿಭಾಗ, ಅಷ್ಟಗ್ರಾಮ ವಿಭಾಗ ಎಂದು ನಾಲ್ಕು ವಿಭಾಗಗಳಾಗಿ ರೂಪುಗೊಂಡಿತು. ಗುಬ್ಬಿಯು ಚಿತ್ರದುರ್ಗ ವಿಭಾಗಕ್ಕೆ ಸೇರಿತ್ತು.

**ಕಮಿಷನ್ನರ ಆಳ್ವಿಕೆ**

ಮೈಸೂರು ಸಂಸ್ಥಾನವು ಬ್ರಿಟೀಷ್ ಕಮಿಷನ್ನರ ಅಧೀನಕ್ಕೆ ಒಳಪಟ್ಟಾಗ ಲಾರ್ಡ್ ಬೌರಿಂಗ್ ಎಂಬುವವರು ಮೈಸೂರು ಸಂಸ್ಥಾನವನ್ನು ಆಡಳಿತದ ಅನುಕೂಲಕ್ಕಾಗಿ ಎಂಟು ಜಿಲ್ಲೆಗಳನ್ನಾಗಿ ವಿಂಗಡಿಸಿದರು. ತುಮಕೂರು ಜಿಲ್ಲೆಯಾಗಿ ಮಾರ್ಪಟ್ಟು ಗುಬ್ಬಿಯು ತುಮಕೂರಿನ ಒಂದು ಭಾಗವಾಗಿ ಸೇರಿತು. 1870ರಿಂದ 1882ರವರೆಗೆ ಜಿಲ್ಲಾ ಮೋಜಿನ ಮೌಲ್ಯಮಾಪನವು ನಡೆದು ತುಮಕೂರು ಜಿಲ್ಲೆಯಲ್ಲಿ ಎಂಟು ತಾಲೂಕುಗಳು ಸೇರಿಸಲ್ಪಟ್ಟವು. ಇವುಗಳಲ್ಲಿ ಗುಬ್ಬಿ ತಾಲೂಕು ಕೂಡ ಒಂದು. ಆದರೆ ಹಿಂದೆ ಕಡಬಾ ತಾಲೂಕು ಕೇಂದ್ರವಾಗಿತ್ತು ಮತ್ತು ಗುಬ್ಬಿ ಅದರ ಭಾಗವಾಗಿತ್ತು.

ಪುನಃ 1915ರಲ್ಲಿ ತುಮಕೂರು ಜಿಲ್ಲೆಯಲ್ಲಿ ಕೆಲವು ಬದಲಾವಣೆ ನಡೆದವು. ಗುಬ್ಬಿ, ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೆಕೆರೆ ತಾಲೂಕುಗಳು ಒಟ್ಟುಗೂಡಿ ಗುಬ್ಬಿ ಸಬ್‌ಡಿವಿಜನ್ ಆಗಿ ರೂಪುಗೊಂಡಿತು. 1935ರಲ್ಲಿ ತುಮಕೂರನ್ನು ಸಬ್‌ಡಿವಿಜನ್ ಆಗಿ ರೂಪಿಸಿ ಗುಬ್ಬಿ ಸಬ್‌ಡಿವಿಜನ್ ಅನ್ನು ರದ್ದುಗೊಳಿಸಿ ತುಮಕೂರು, ಗುಬ್ಬಿ, ಕುಣಿಗಲ್ ತಾಲೂಕುಗಳನ್ನು ವಿಲೀನಗೊಳಿಸಿದರು. ಈಗ ಗುಬ್ಬಿಯು ತಾಲೂಕು ಕೇಂದ್ರ ಎನಿಸಿದ್ದು ತುಮಕೂರು ಜಿಲ್ಲೆಯ ಒಂದು ಭಾಗವಾಗಿದೆ.[15]

ಕರ್ನಾಟಕದ ಹಲವಾರು ತಾಲೂಕುಗಳಂತೆ ಗುಬ್ಬಿಯನ್ನು ಸಾಧಾರಣವಾದ ತಾಲೂಕು ಎಂದು ಹಗುರವಾಗಿ ಪರಿಗಣಿಸಬಾರದು. ಈ ತಾಲಳೂಕಿಗೆ ಒಂದು ಐತಿಹಾಸಿಕ ಪರಂಪರೆಯ ಮಹತ್ವವಿದೆ. ಸಾಹಿತ್ಯ ಮತ್ತು ಧಾರ್ಮಿಕ ದೃಷ್ಟಿಯಿಂದ ನೋಡುವುದಾದರೆ ಕನ್ನಡ ಸಾಹಿತ್ಯದ ಮೊದಲನೆ ಕ್ರಾಂತಿ ಕಲ್ಯಾಣದಲ್ಲಾದರೆ, ಎರಡನೇ ಕ್ರಾಂತಿ ಗುಬ್ಬಿಯಲ್ಲಿ ಸಂಭವಿಸಿದೆ. ವೀರಶೈವ ಧರ್ಮದ ಮೊದಲ ಕ್ರಾಂತಿ ಕಲ್ಯಾಣದಲ್ಲಿ ನಡೆದರೆ, ಅದರ ಪುನರುಜ್ಜೀವನ ಗುಬ್ಬಿ ತಾಲೂಕಿನಲ್ಲಿ ಸಂಭವಿಸಿದುದನ್ನು ಚಾರಿತ್ರಿಕ ದಾಖಲೆಗಳು ತಿಳಿಸುತ್ತವೆ. ಕರ್ನಾಟಕದ ಚರಿತ್ರೆಗೆ ತಿರುವನ್ನು ನೀಡುವ ಇಂತಹ ಮಹತ್ವಪೂರ್ಣ ಘಟನೆಗಳು ನಡೆದಿರುವುದರಿಂಲೇ ಗುಬ್ಬಿಯನ್ನು ಸಾಧಾರಣವಾದ ಬೇರೆ ತಾಲೂಕುಗಳಂತೆ ಪರಿಗಣಿಸದೆ ವಿಶೇಷವಾಗಿ ನೋಡಬೇಕಾಗಿದೆ. ಸಾ.ಶ. 1586ರವರೆಗೆ ಗುಬ್ಬಿ ಒಂದು ಸಾಧಾರಣ ಊರು. ಅದಿನ್ನೂ ತಾಲೂಕಿನ ಸ್ಥಾನಮಾನ ಪಡೆದುಕೊಂಡಿರಲಿಲ್ಲ. ಆಗ ಕಡಬ

ತಾಲೂಕಾಗಿತ್ತು. ಅದಕ್ಕಿಂತ ಮೊದಲು ಹಾಗಲವಾಡಿ ರಾಜ್ಯವನ್ನು ಹೈದರಾಲಿ ಸಾ.ಶ. 1779ರಲ್ಲಿ ಕಬಳಿಸಿ ಮೈಸೂರಿಗೆ ಸೇರಿಸಿಕೊಂಡ ಮೇಲೆ ಹಾಗಲವಾಡಿಗೆ ಅಂದು ಜಿಲ್ಲಾ ಸ್ಥಾನಮಾನ ನೀಡಲಾಗಿತ್ತು. ಆ ಜಿಲ್ಲೆಗೆ ಗುಬ್ಬಿಯೂ ಸೇರಿತ್ತೆಂದರೆ ಆಶ್ಚರ್ಯವಾಗುತ್ತದೆ. ಹೀಗೆ ಹಲವು ದಿನಗಳ ಮಟ್ಟಿಗಾದರೂ ಹಾಗಲವಾಡಿ ಜಿಲ್ಲೆ, ಕಡಬ ತಾಲೂಕು ಇವುಗಳ ವ್ಯಾಪ್ತಿಯಲ್ಲಿ ಗುಬ್ಬಿ ಸೇರಿತ್ತು. ಆ ಸಂದರ್ಭದಲ್ಲಿ ಮೂಗನಾಯ್ಕನಕೋಟೆ, ಚೇಳೂರು, ಚಂದ್ರಶೇಖರಪುರ, ನಿಟ್ಟೂರು, ಸಂಪಿಗೆ, ಇತ್ಯಾದಿ ಪಟ್ಟಣದ ಸ್ಥಾನಮಾನವನ್ನು ಪಡೆದುಕೊಂಡಿದ್ದವು. ಸಾ.ಶ. 1810ರಲ್ಲಿ ಹಾಗಲವಾಡಿ ಜಿಲ್ಲಾ ಸ್ಥಾನ ಕಳೆದುಕೊಂಡ ನಂತರ ಸಾ.ಶ. 1888ರಲ್ಲಿ ಕಡಬ ತಾಲೂಕಿನ ಸ್ಥಾನಮಾನ ಕಳೆದುಕೊಂಡಿತು. ಹೀಗೆ ಕಡಬ ಮತ್ತು ಹಾಗಲವಾಡಿ 19ನೇ ಶತಮಾನದ ಉತ್ತರಾರ್ಧದಲ್ಲಿ ಪ್ರಾಮುಖ್ಯತೆ ಕಳೆದುಕೊಂಡವು. ಕೇವಲ ಪಟ್ಟಣವಾಗಿದ್ದ ಗುಬ್ಬಿ ಏಳಿಗೆಗೆ ಬಂದು ತಾಲೂಕಿನ ಕೇಂದ್ರವಾಯಿತು. ಆಗ ಗುಬ್ಬಿ ತಾಲೂಕಿನಲ್ಲಿ 8 ಹೋಬಳಿಗಳಿದ್ದವು. ಅವುಗಳೆಂದರೆ, ಚೇಳೂರು, ಗುಬ್ಬಿ, ಕಡಬ, ದಂಡಿನಶಿವರ, ಚಟ್ನಹಳ್ಳಿ, ಹಾಗಲವಾಡಿ, ಕಲ್ಲೂರು, ನಿಟ್ಟೂರು ಈ ಎಂಟೂ ಹೋಬಳಿಗಳಿಂದ 421 ಗ್ರಾಮಗಳೂ, 284 ಹ್ಯಾಮ್ಲೆಟ್(ಕೊಪ್ಪಲು/ವಾಸಸ್ಥಾನ)ಗಳಿದ್ದವು. ಆಗ ಗುಬ್ಬಿ ತಾಲೂಕಿಗೆ ಉಪವಿಭಾಗದ ಸ್ಥಾನ ಪ್ರಾಪ್ತವಾಯಿತು. ಈ ವಿಭಾಗಕ್ಕೆ ತಿಪಟೂರು, ಚಿಕ್ಕನಾಯಕನಹಳ್ಳಿ, ಗುಬ್ಬಿ, ತುರುವೇಕೆರೆ (ಉಪ ತಾಲೂಕು) ಸೇರಿದ್ದವು. ಆದರೆ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಳ್ವಿಕೆಯ ಕಾಲದಲ್ಲಿ ಗುಬ್ಬಿ ಉಪವಿಭಾಗವನ್ನು 1916ರಲ್ಲಿ ರದ್ದು ಮಾಡಿ ಗುಬ್ಬಿಯನ್ನು ತುಮಕೂರು ಸಬ್‌ಡಿವಿಜನ್‌ಗೆ ಸೇರಿಸಲಾಯಿತು. ಜೊತೆಗೆ ಆಗ ಜಿಲ್ಲೆಯ ಎಲ್ಲಾ ತಾಲೂಕುಗಳಿಗಿಂತ ಬಹುದೊಡ್ಡ ತಾಲೂಕಾಗಿದ್ದ ಗುಬ್ಬಿಯಿಂದ ಎರಡು ಹೋಬಳಿಗಳನ್ನು ಬೇರ್ಪಡಿಸಲಾಯಿತು. ಅವುಗಳೆಂದರೆ ಕಲ್ಲೂರು ಮತ್ತು ಚಾಟ್ನಹಳ್ಳಿ. ಈ ಎರಡೂ ಹೋಬಳಿಯ ಸ್ಥಾನಮಾನವನನ್ನು ಕಳೆದುಕೊಂಡವು. ಪ್ರಸ್ತುತ ಗುಬ್ಬಿ ಕಸಬಾ ಹೋಬಳಿಯ 53, ಚಂದ್ರಶೇಖರಪುರ ಹೋಬಳಿಯ 36, ಚೇಳೂರು ಹೋಬಳಿಯ 62, ಹಾಗಲವಾಡಿ ಹೋಬಳಿಯ 54, ನಿಟ್ಟೂರು ಹೋಬಳಿಯ 80, ಕಡಬ ಹೋಬಳಿಯ 63 ಗ್ರಾಮಗಳು ಸೇರಿದಂತೆ ಒಟ್ಟು 348 ಗ್ರಾಮಗಳು ಗುಬ್ಬಿ ತಾಲೂಕಿನಲ್ಲಿ ಕಂಡು ಬರುತ್ತದೆ.

**ಉಪಸಂಹಾರ**

ಕನ್ನಡ ನಾಡಿನ ಬಗೆಗೆ ಗುಬ್ಬಿಯ ಜನತೆ ಗಾಢವಾದ ಅಭಿಮಾನವುಳ್ಳವರು. ಏಕೆಂದರೆ ಅವರಿಗೆ ಅಂತಹ ಪರಂಪರೆ ಇದೆ ಎಂಬುದನ್ನು ಆರಂಭದಲ್ಲಿ ತಿಳಿಸಲಾಗಿದೆ. 1982ರ ಗೋಕಾಕ್ ಚಳವಳಿ ಕಾಲದಲ್ಲಿ ಇಲ್ಲಿನ ಜನತೆ ಈ ಆಂದೋಲನದಲ್ಲಿ ಪಾಲ್ಗೊಂಡು ಗುಬ್ಬಿ ತೋಟದಪ್ಪನವರು, ನಾಟಕರತ್ನ ಗುಬ್ಬಿವೀರಣ್ಣನವರು ಜನಿಸಿದ ಈ ಪಟ್ಟಣದಲ್ಲಿ ಕರ್ನಾಟಕದ ರಾಜಕೀಯದಲ್ಲಿ ಮಹತ್ತರವಾದ ತಿರುವು ನೀಡುವ ನಾಯಕರಾರೂ ಬಂದಿಲ್ಲದೆ ಇರುವುದು ಆಶ್ಚರ್ಯದ

ಸಂಗತಿಯಾಗಿದೆ. ಆದರೂ ಕೂಡ ಈ ತಾಲೂಕಿನ ಸಾರ್ವಜನಿಕರಿಂದ ಆರಿಸಿ ಹೋದ ನಮ್ಮ ಪ್ರತಿನಿಧಿಗಳಾದ ಸಿ.ಟಿ. ಮುಕ್ಕಣ್ಣಪ್ಪ, ಶಿವಸಂದ್ರ ಚಿಕ್ಕೇಗೌಡ, ಗಟ್ಟಿ ಚಂದ್ರಶೇಖರ್, ಸಾಗರನಹಳ್ಳಿ ರೇವಣ್ಣ, ಜಿ.ಎಸ್. ಶಿವನಂಜಪ್ಪ, ವೀರಣ್ಣಗೌಡ ಮತ್ತು ಶ್ರೀನಿವಾಸ್ ಇವರೆಲ್ಲಾ ತಮ್ಮದೇ ಆದ ರೀತಿಯಲ್ಲಿ ವಿಧಾನಸೌಧದಲ್ಲಿ ಪ್ರತಿಪಾದನೆ ಮಾಡುತ್ತಾ ಗುಬ್ಬಿ ತಾಲೂಕಿನ ಏಳಿಗೆಗೆ ಕಾರಣರಾಗಿದ್ದಾರೆ. ಸಾಗರನಹಳ್ಳಿ ರೇವಣ್ಣನವರು ರಾಮಕೃಷ್ಣ ಹೆಗ್ಗಡೆಯವರ ಮಂತ್ರಿ ಮಂಡಲದಲ್ಲಿ ಕೃಷಿ ಸಚಿವರಾಗಿ ಗಮನ ಸೆಳೆದರು. ಹುಟ್ಟು ಹೋರಾಟಗಾರರಾದ ಇವರು ಗಾಂಧಿವಾದಿಗಳಾಗಿದ್ದರು. ಈ ತಾಲೂಕು ವಿಧಾನ ಪರಿಷತ್ತಿಗೂ ಒಬ್ಬ ಸದಸ್ಯನನ್ನು ದೊರಕಿಸಿಕೊಟ್ಟಿತು. ಎಸ್. ಚನ್ನಬಸವಯ್ಯ ಶಿಕ್ಷಕರ ಪ್ರತಿನಿಧಿಯಾಗಿ ಮೂರು ಬಾರಿ ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸಿದ್ದು ದಾಖಲಾರ್ಹ ಸಂಗತಿ. ಶಿಕ್ಷಕರ ಸಮಸ್ಯೆಗಳನ್ನು ಆಳವಾಗಿ ಅರಿತುಕೊಂಡಿದ್ದ ಅವರು ಸಮಗ್ರ ಶಿಕ್ಷಣ ಮಸೂದೆ ಬರಲು ಕಾರಣಕರ್ತರಾಗಿರುವುದನ್ನು ಮರೆಯುವಂತಿಲ್ಲ. ಪ್ರಾಚೀನ ಕಾಲದಲ್ಲಿ ಧಾರ್ಮಿಕವಾಗಿ ಮಹತ್ವ ಪಡೆದ ಗುಬ್ಬಿಯು ಆಧುನಿಕ ಕಾಲದಲ್ಲಿ ರಾಜಕೀಯ ಮಹತ್ವ ಪಡೆಯುವುದರತ್ತ ಹೆಜ್ಜೆ ಇಡಬೇಕಾಗಿದೆ. ಹೀಗೆ ಗುಬ್ಬಿ ತಾಲೂಕು ಪ್ರಾಚೀನ ಕಾಲದಿಂದಲೂ ವೈಶಿಷ್ಟ್ಯಪೂರ್ಣ ಸಾಧನೆಗಳನ್ನು ಮಾಡಿ ಇಂದಿನ ದಿನಗಳಲ್ಲಿ ಅದೇ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿ ಗುಬ್ಬಿ ತಾಲೂಕಿನ ಜನತೆಯ ಮೇಲಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

**ಕೊನೆಟಿಪ್ಪಣಿಗಳು**


1. ಭಾಸ್ಕರಪ್ಪ ಸಿ.ಎನ್. (1981). ತುಮಕೂರು ಜಿಲ್ಲಾ ದರ್ಶನ. ಟೈಮ್ಸ್ ಪಬ್ಲಿಕೇಷನ್, ತುಮಕೂರು. ಪು. ಸಂ. 5–7
2. ನಾಗಭೂಷಣ ಸಿ. (1991). ಗುಬ್ಬಿ: ಒಂದು ಸಾಂಸ್ಕೃತಿಕ ದರ್ಶನ. ಸ್ನೇಹನಿಧಿ ಮುದ್ರಣ, ಬೆಂಗಳೂರು. ಪು.ಸಂ. 13
3. ಮೇಲಿನದೇ., ಪು.ಸಂ . 13–14
4. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ 9, ಚಿತ್ರದುರ್ಗ, ಶಾ.ಸಂ. 4
5. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ 9, ಚಿತ್ರದುರ್ಗ, ಶಾ.ಸಂ. 2
6. ಪೂರ್ವೋಕ್ತ–2., ಪು.ಸಂ. 14
7. ಚಿಕ್ಕಣ್ಣ ಯಣ್ಣೆಕಟ್ಟೆ. (2003). ತುಮಕೂರು ಜಿಲ್ಲಾ ಜಾತ್ರೆಗಳು, ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು. ಪು.ಸಂ. 37
8. ಪೂರ್ವೋಕ್ತ–1., ಪು.ಸಂ. 5–7
9. ಪೂರ್ವೋಕ್ತ–2., ಪು.ಸಂ. 16

10. ಮೇಲಿನದೇ., ಪು.ಸಂ. 16–17
11. ಮೇಲಿನದೇ., ಪು.ಸಂ. 17
12. ಮೇಲಿನದೇ., ಪು.ಸಂ. 17
13. ಯೋಗೀಶ್ವರಪ್ಪ ಡಿ.ಎನ್. (2012). ಕಲ್ಪಶೋಧ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು. ಪು.ಸಂ. 420
14. ಪೂರ್ವೋಕ್ತ–2., ಪು.ಸಂ. 22
15. ಪೂರ್ವೋಕ್ತ–13., ಪು.ಸಂ 421–422